MYSORE LEGISLATIVE ASSEMBLY

FIFTY-FIRST DAY

Monday, 6th July 1964.

The House met in the Assembly Hall, Vidhana Soudha, Bangalore, at Twelve of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(to which oral answers were given)

Grant of a Government Girls' High School to Ramanagaram Town.

* *Q.*—547. Sri T. MADAIAH GOWDA (Ramanagaram).—

Will the Government be pleased to state :—

(*a*) for how long the people of Ramanagaram town are requesting the Government to grant a Government Girls' High School at Ramanagaram town ;

(*b*) the number of girls that are studying now in Government Boys' High School ;

(*c*) whether it is a fact that the Hon'ble Chief Minister has long back promised a Girls' High School for that town ;

(*d*) whether they intend granting a Government Girls' High School to this place out of ten planned High Schools ;

(*e*) whether the Town Municipality has promised to give Rs.80,000 worth of building and playground for the said High School ?

A.— Sri S. R. KANTHI (Minister for Education).—

(*a*) Since June 1962.

(*b*) 141.

(*c*) There is no record of such a promise.

(*d*) The matter is under consideration. There is already a private Girls' High School in the locality.

(*e*) The Municipality has offiered to provide suitable accommodation for the building.

ಶ್ರೀ ಟಿ.ಮಾದಯ್ಯ ಗೌಡ.—ಮಾನ್ಯ ವಿದ್ಯಾಮಂತ್ರಿಗಳಿಗೆ ಬಾಲಕಿಯರ ಪಾಶ್ಚಿಪವಿದ್ಯಾಭ್ಯಾಸದಲ್ಲಿ ಬಹಳ ಆಸಕ್ತಿ ಇರುವುದು. ಅಂಥದರಲ್ಲಿ ಈ ಸ್ಕೂಲು ದಯಪಾಲಿಸಲು ಇರುವ ಅನಾದರಣೆ ಕಾರಣವೇನು ?

† ಶ್ರೀ ಎಸ್. ಆರ್. ಕಂಠಿ.—ಅನಾದರಣೆ ಏನೂ ಇಲ್ಲ. ಅಲ್ಲಿ ಒಂದು ಸ್ಕೂಲು ಈಗ ಇದೆ. ಇದಕ್ಕೆ ರಾಮನಗರದಲ್ಲಿ ಜಾಗ ಕೊಟ್ಟರೆ ಬರುತ್ತದೆ. ಅದಕ್ಕಾಗಿ ಯೋಚನೆ ನಡೆದಿದೆ.

ಶ್ರೀ ಟಿ. ಮಾದಯ್ಯ ಗೌಡ.—ಈಗಿರತಕ್ಕಂಥ ಸ್ಕೂಲು ಏನಿದೆ, ಅದು ರಾಮನಗರದ ಟೌನಿನ ವರಿಗೆ ಮತ್ತು ತಾಲ್ಲೂಕಿನವರಿಗೆ ಸ್ವಲ್ಪವೂ ಪ್ರಯೋಜನವಾಗುವುದಿಲ್ಲ. ಆದರಿಂದ ತೊಂದರೆಯಾಗುತ್ತಿದೆ. ಬಡವರ ದೆಸೆಯಿಂದ ಈ ಸ್ಕೂಲನ್ನು ಕೊಡಬೇಕೆಂದು ಜನರು ಸರಕಾರಕ್ಕೆ ಒತ್ತಾಯ ಮಾಡುತ್ತಿರುವುದು ನಿಜವೆ ?

ಶ್ರೀ ಎಸ್. ಆರ್. ಕಂಠಿ.—ಅವರು ಸರಕಾರಿ ಗರ್ಲ್ಸ್ ಹೈಸ್ಕೂಲು ಕೇಳಿದ್ದು ನಿಜ. ಅದು ಕೊಡಲಿಕ್ಕೆ ಸರಕಾರಕ್ಕೆ ಬಹಳ ತೊಂದರೆ ಇದೆ. ಆದ್ದರಿಂದ ಆ ಹೈಸ್ಕೂಲನ್ನು ಆ ಊರಿಗೇ ತಂದು ನಡೆಸುವುದಕ್ಕೆ ಸಿದ್ಧರಿದ್ದಾರೆಂದು ವರದಿ ಸರಕಾರಕ್ಕೆ ಬಂದಿದೆ.

ಶ್ರೀ ಟಿ. ಮಾದಯ್ಯ ಗೌಡ.—ಆ ಪ್ರೈವೇಟು ಹೈಸ್ಕೂಲು ಸರಿಯಾಗಿ ನಡೆಯುತ್ತಾ ಇಲ್ಲ. ಅದು ವರ್ಷ ವರ್ಷ ನಡೆಯುತ್ತಾ ಇದ್ದರೂ, ಅದು ಕೇವಲ ವ್ಯಾಪಾರ ದೃಷ್ಟಿಯಿಂದ ನಡೆಯುತ್ತಾ ಇದೆ. ಟೌನಿನವರಿಗೆ ಇಷ್ಟು ಮಾತ್ರವೂ ಉಪಯೋಗವಾಗುವುದಿಲ್ಲ. ಗವರ್ನಮೆಂಟು ಹೈಸ್ಕೂಲನ್ನೇ ಕೊಡಿ ಎಂದು ಸ್ಥಳದವರು ತಮಗೆ ಅನೇಕ ಮನವಿಗಳನ್ನು ಸಲ್ಲಿಸಿದ್ದಾರೆಯೇ ?

ಶ್ರೀ ಎಸ್. ಆರ್. ಕಂಠಿ.—ಪ್ರೈವೇಟು ಹೈಸ್ಕೂಲುಗಳನ್ನು ವ್ಯಾಪಾರ ದೃಷ್ಟಿಯಿಂದ ನಡೆಸುತ್ತಿದ್ದಾರೆ ಎಂದು ಹಾಗೆಲ್ಲಾ ಮಾತನಾಡಿದರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ. ರಾಜ್ಯದಲ್ಲಿ ಬಹಳ ಜಾಸ್ತಿ ಪ್ರೈವೇಟ್ ಹೈಸ್ಕೂಲುಗಳಿವೆ. ಈ ವರ್ಷ ಎಲ್ಲಾ ಲೆಕ್ಕ ಹಾಕಿದರೆ 1,350 ಹೈಸ್ಕೂಲುಗಳಾಗುತ್ತವೆ. ಇದರಲ್ಲಿ ಸರಕಾರದ್ದು 185 ಮಾತ್ರ. ಈ ದೃಷ್ಟಿಯಿಂದ ನೋಡಿದರೆ ಪ್ರೈವೇಟು ಹೈಸ್ಕೂಲುಗಳಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಪ್ರೈವೇಟು ಹೈಸ್ಕೂಲುಗಳು ರಿಸಲ್ಟು ದೃಷ್ಟಿಯಿಂದ ಚೆನ್ನಾಗಿವೆ. ಸರಕಾರಿ ಹೈಸ್ಕೂಲುಗಳಲ್ಲಿ ಅಷ್ಟು ಚೆನ್ನಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗಿರತಕ್ಕಂಥ ಖಾಸಗಿ ಹೈಸ್ಕೂಲಿನಲ್ಲಿ ಎಷ್ಟು ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ ?

ಶ್ರೀ ಎಸ್. ಆರ್. ಕಂಠಿ.—ಖಾಸಗಿ ಗರ್ಲ್ಸ್ ಹೈಸ್ಕೂಲಿನಲ್ಲಿ ನನಗೆ ಗೊತ್ತಿಲ್ಲ, ಏಕೆಂದರೆ ಆ ಇನ್‌ಸ್ಪೆಕ್ಷನ್ ಇಲ್ಲ.

Sri SIDDAIAH KASHIMATH.—Supplementary to (*c*): May I know whether the Chief Minister has given permission orally ?

Sri S. R. KANTHI.—There is no such record.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೆಣ್ಣು ಮಕ್ಕಳ ಗಂಡು ಮಕ್ಕಳ ಸಂಖ್ಯೆ 50–50 ಇದೆ. ಹೆಣ್ಣು ಮಕ್ಕಳಿಗೆ ಕೋಎಜುಕೇಶನ್ ಕೊಡುವುದು ಸೆಕೆಂಡರಿ ಸ್ಟೇಜಿನಲ್ಲಿ ಸ್ವಲ್ಪ ಕಷ್ಟವಿರುತ್ತದೆ. ಅಲ್ಲಿ ಹೆಣ್ಣು ಮಕ್ಕಳು ಜಾಸ್ತಿ ಇರುವುದರಿಂದ ರಾಮನಗರದಲ್ಲಿ ಅವರಿಗೆ ಪ್ರತ್ಯೇಕವಾಗಿ ಒಂದು ಹೈಸ್ಕೂಲನ್ನು ತೆಗೆಯಲು ಸರಕಾರ ಯೋಚನೆ ಮಾಡುತ್ತದೆಯೇ ?

ಶ್ರೀ ಎಸ್. ಆರ್. ಕಂಠಿ.—ಹಾಗೆ ಆಗುವುದಿಲ್ಲ. ಜನಗಳು ಮುಂದೆ ಬಂದು ಮಾಡುತ್ತೇವೆಂದರೆ ನಮ್ಮ ಅಭ್ಯಂತರವಿರುವುದಿಲ್ಲ. ಅಲ್ಲಿಗೂ ಕೂಡ ಕಾಂಪಿಟೆಶನ್ ಆಗದಂತೆ ನೋಡಬೇಕಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ.—(ಬಿ) ನಲ್ಲಿ 141 ಹೆಣ್ಣು ಮಕ್ಕಳು ಎಂದು ಹೇಳಿದ್ದೀರ: ಈ 141 ಹೆಣ್ಣು ಮಕ್ಕಳೂ ಪ್ರೈವೇಟು ಗರ್ಲ್ಸ್ ಹೈಸ್ಕೂಲಿಗೇ ಹೋಗುತ್ತಿದ್ದಾರೋ ?

ಶ್ರೀ ಎಸ್. ಆರ್. ಕಂಠಿ.—ಅವರು ಗವರ್ನಮೆಂಟು ಸ್ಕೂಲಿಗೆ ಹೋಗುವವರು.

ಶ್ರೀ ಸಿ. ಆರ್. ರಂಗೇಗೌಡ.—ರಾಮನಗರಂ ಪ್ರೈವೇಟು ಹೈಸ್ಕೂಲಿನ ಆಡಳಿತ ಮಂಡಳಿಯ ಅಧ್ಯಕ್ಷರು ವಿದ್ಯಾಮಂತ್ರಿಗಳು ಅಂತ ಹೇಳುತ್ತಾರೆ, ನಿಜವೇ ?

ಶ್ರೀ ಎಸ್. ಆರ್. ಕಂಠಿ.—ನಾನು ಅದಕ್ಕೆ ಇಲ್ಲ. ಅವರು ತಿಳಿದುಕೊಂಡಿರುವುದು ತಪ್ಪು.

ಶ್ರೀ ಡಿ. ಎಂ. ಸಿದ್ದಯ್ಯ.—(ಬಿ) ಗೆ ಉತ್ತರವಾಗಿ 141 ಹೆಣ್ಣುಮಕ್ಕಳು ಎಂದು ಹೇಳಿದ್ದೀರಿ. ಇದರಲ್ಲಿ ಎಷ್ಟು ಜನ ಪ್ರೈವೇಟು ಗರ್ಲ್ಸ್ ಹೈಸ್ಕೂಲಿಗೆ ಹೋಗುತ್ತಾ ಇದ್ದಾರೆ ?

†Indicates that the remarks or speeches have not been revised by the member concerned

Mr. SPEAKER.—These are girls studying in the Government Boys' High School. The Minister was right in pointing it out.

ಶ್ರೀ ಡಿ. ಎಂ. ಸಿದ್ದಯ್ಯ.—ಈ ಹೆಣ್ಣುಮಕ್ಕಳು ಗೌವರ್ನಮೆಂಟ್ ಹೈಸ್ಕೂಲ್‌ನಲ್ಲಿ ಓದುವವರು ಪ್ರೈವೇಟ್ ಹೈಸ್ಕೂಲಿಗೆ ಹೋಗುವುದಕ್ಕೆ ಏನು ಅಡಚಣೆ ಇದೆ ?

ಶ್ರೀ ಎಸ್. ಆರ್. ಕಂಠಿ.—ಅದು ಏನಿದೆ ಎಂಬುದನ್ನು ನಾನು ಹೇಳಲಾರೆ. ಅದು ತಂದೆ ತಾಯಿ ಗಳಿಗೆ ಸಂಬಂಧಪಟ್ಟ ವಿಷಯ. ಅಲ್ಲಿಗಾದರೂ ಕಳುಹಿಸಬಹುದು ಇಲ್ಲಿಗಾದರೂ ಕಳುಹಿಸಬಹುದು.

ಶ್ರೀ ಟಿ. ಮಾದಯ್ಯ ಗೌಡ.—ಪ್ರೈವೇಟ್ ಹೈಸ್ಕೂಲು ಅಂತ ತೆಗೆದಿದ್ದಾರೆ, ಅಲ್ಲಿ ಅವರಿಗೆ ಹಣದ ಬಲ ಇಲ್ಲ, ಬೇಕಾದಂತಹ ಸಲಕರಣೆಗಳು ಇಲ್ಲ, ಲೈಬ್ರರಿ ಇಲ್ಲ, ಎಕ್ವಿಪ್‌ಮೆಂಟ್ ಇಲ್ಲ, ಟೀಚರ್ಸ್‌ನ್ನು ಆಗಾಗ್ಗೆ ಬದಲಾವಣೆ ಮಾಡುತ್ತಾ ಇದ್ದಾರೆ. ಅದು ಸರಿಯಾಗಿ ನಡೆಯುತ್ತಾ ಇಲ್ಲ ಎಂಬುದನ್ನು ಸರ್ಕಾರದವರ ಗಮನಕ್ಕೆ ತಂದರೂ ಕೂಡ ಇದುವರೆಗೂ ಏನೂ ಪರಿಶೀಲನೆ ಮಾಡಲಿಲ್ಲ ಎಂಬುದು ನಿಜವೇ ?

ಶ್ರೀ ಎಸ್. ಆರ್. ಕಂಠಿ.—ಇದನ್ನು ನಮ್ಮ ಗಮನಕ್ಕೆ ತರುತ್ತಾ ಇದ್ದಾರೆ, ಈ ವಿಚಾರವಾಗಿ ಸರ್ಕಾರ ಅಲ್ಲಿಂದ ರಿಪೋರ್ಟ್ ತರಿಸಿದೆ. ಆದರೆ ತಾವೇನು ಹೇಳುತ್ತಾ ಇದ್ದೀರಿ ಆ ರೀತಿ ಇಲ್ಲ, ಇನ್ನೂ ಒಮ್ಮೆ ನೋಡಿನಬೇಕೆಂದರೆ ತಾವು ಯಾರನ್ನು ಹೇಳುತ್ತೀರಿ ಅವರನ್ನು ಕಳುಹಿಸಿ ವಿಚಾರ ಮಾಡಿಸಲಕ್ಕೆ ಸಿದ್ಧವಾಗಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಪ್ರೈವೇಟ್ ಗರ್ಲ್ಸ್ ಹೈಸ್ಕೂಲು ತಮ್ಮ ಒತ್ತಾಸೆಯ ಮೇಲೆ ಆಗಿದೆ ಅಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ನನ್ನ ಒತ್ತಾಸೆಯ ಮೇಲೆ ಹೇಗೆ ಆಗುತ್ತದೆ ? ಜನರು ಒತ್ತಾಯ ಮಾಡಿದರು ಅದರ ಮೇಲೆ ಆಗಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಇಲ್ಲ 141 ಜನ ಹೆಣ್ಣುಮಕ್ಕಳು ಇರುವುದರಿಂದ ಅವರಿಗೇ ಪ್ರತ್ಯೇಕವಾಗಿ ಒಂದು ಗರ್ಲ್ಸ್ ಹೈಸ್ಕೂಲನ್ನು ಪ್ರಾರಂಭ ಮಾಡುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಕಂಠಿ.—ಅದಕ್ಕಾಗಲೇ ಉತ್ತರ ಕೊಟ್ಟಿದ್ದೇನೆ.

Taking over of the private primary schools in North Kanara District under the control of District School Board.

*Q.—577. Sri S. RAJAGOPAL (K.G.F.) [on behalf of SRI BAPU RAO HULSURKAR (Hulsur)].—

Will the Government be pleased to state :—

(*a*) the total number of private primary schools from the North Kanara District which have not yet been taken over by the District School Board :

(*b*) whether it is a fact that they have ordered that all such schools from North Kanara should be taken over by the District School Board and if so, whether the order was communicated to the District School Board, North Kanara ;

(*c*) what is the cause for the delay in taking over these schools by the District School Board in North Kanara District ?

*A.—Smt. GRACE TUCKER (Deputy Minister for Education).—

(*a*) 396 as on 31st March 1964.

(*b*) No. The second part of the question does not arise.

(*c*) The matter was under consideration. The Director of Public Instruction has since been empowered to allow the Board to start its schools in places where private managements actually close down their primary schools.